ಕಡೂರು ಡಿಸ್ಟ್ರಿಕ್ಟ್.

ತಾರೀಖು 24ನೇ ಫಿಬ್ರವರೀ 1887.

ಕಡೂರು ಡಿಸ್ಟ್ರಿಕ್ಟ್ ತರೀಕೆರೆ ತಾಲ್ಲೂಕು ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಇದರ ಕೆಳಗೆ ನಮೂದಿಸಿರುವ ಬೇವಾರಸ್ ದಸ್ತಾವೇಜನ್ನು ಕ್ರಮ ಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕರಾಗಲಿ ಈ ತಾರೀಖು ಲಾಗಾಯತು ಎಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡೆಯಬೇಕು. ತಪ್ಪಿದಲ್ಲಿ ರಿಜಿಸ್ಟ್ರೇಷನ್ ಆಕ್ಟ್ 85ನೇ ಸೆಕ್ಷನ್ ವಿ.ರೆ ನಾಶಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ಸಬ್ ರಿಜಿಸ್ಟ್ರಾರ್ ಆಫೀಸ್ ಹೆಸರು.	'ದಸ್ತಾವೇಜು ಬರದು ಕೊಟ್ಟವರ ಹೆಸರು ಮತ್ತು ವಾಸಸ್ಥಳ.	ದಸ್ತಾವೇಜು ಬರಿಸಿಕೊಂಡವರ ಹೆಸರು ಮತ್ತು ವಾಸಸ್ಥಳ.	ರಿಜಸ್ಟರ್ ಬಗ್ಗೆ ಹಾಜರ್ಮಾಡಿದ ತಾರೀಖು.	ರಿಜಿಸ್ಟ್ರಾದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
1ನೇ ಬುಕ್ಕು ನಂಬರ್ 182 ——— 1884—85 ತರೀಕೆರೆತಾಲ್ಲೂಕು ಸಬ್ ರಿಜಿಸ್ಟ್ರಾರ್	ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ವಾಸಸ್ತ ದೊಡ್ಡಕಾಡಯ್ಯನ ಮಗ ಲ್ಲಪ್ಪ	ತರೀಕೆರೆ ತಾಲ್ಲೂಕು ಬುಕ್ಕಾಂಬುದಿ ವಾಸಸ್ತ ಮಂಜನ್ನಯ್ಯನ ಮಗ ವಿಲ್ಲಪ್ಪ 1, ಮುಪ್ಪಂಣನ ಜನ್ನಯ್ಯ 1	9ನೇ ಫಿಬ್ರವರೀ 1885ನೇ ಇಸವಿ	9ನೇಫಿಬ್ರವರಿ 85ನೇ ಇಸವಿ	ಬುಕ್ಕಾಂಬುದಿ ಕಸಬಾದಲ್ಲಿರುವ ರೆವಿನ್ಯೂ ಸರ್ವೆ ನಂಬರ್ 301ನೇ ಪೈಕಿ ಖುಷ್ಕಿ ಯಕರೆ ೦-೩೦ ಆಕಾರ ೦-೩೦ ರೂಪಾಯಿನ ಜಮೀನನ್ನ 2 ರೂಪಾಯಿಗೆ ಕ್ರಮ.

ಜಿ. ಎಫ್. ಮೈಕಲ್‌ಜಾರ್ಜ್,
ರಿಜಿಸ್ಟ್ರಾರ್.

ಸರ್ಕ್ಯೂಲರ್.

ಮೈಸೂರ ಗೆಜೆಟ್ ಕಂಪೈಲರ್ ಯವರಿಂದ.

ಮೈಸೂರು ೀಮೆಯ ತಾಲ್ಲೂಕು ಜಾತ್ ಅಮಲ್‌ದಾರರುಗಳಿಗೆ.

ಮರ್ಕುಂ 1ನೇ ಮಾರ್ಚಿ 1887ನೇ ಇಸವಿ.

ತಾಲ್ಲೂಕು ಖಜಾನೆಗೆ ಗೆಜೆಟ್ ಚಂದಾ ಮೊಬಲಗು ಪಾವತೀ ಮಾಡಲ್ಪಟ್ಟು ಆ ಬಾಬತು ಜಮೇ ಆದ ರಿಪೋರ್ಟುಗಳು ಕೆಲ ಸಂದರ್ಭಗಳಲ್ಲಿ ಮೈಸೂರ ಗೆಜೆಟ್ ಆಫೀಸಿಗೆ ಕೂಡ್ಲೇ ಕಳುಹಿಸಲ್ಪಡದೆ ಸಾವಕಾಶವಾಗಿರುವ ಸಂಗತಿ ತಿಳಿಯ ಬಂದಿರುವದರಿಂದ, ಕಂಪೈಲರವರು ಸೂಚಿಸುವದೇನಂದರೆ, ತಾಲ್ಲೂಕು ಅಮಲ್‌ದಾರರುಗಳು, ಚಂದಾ ಮೊಬಲಗು ಪಾವತೀ ಮಾಡಿಲ್ಪಟ್ಟ ಬಡನೆ ಮುಖ್ಯವಾಗಿ ಹೊಸದಾದ ಚಂದಾ ದಾರರಿಂದ ಮೊಬಲಗು ಬಂದ ಬಗ್ಗೆ ತಕ್ಷಣ ಈ ಆಫೀಸಿಗೆ ಮಾಮೂಲ್ ಮೇರೆ ತಿಳಿಸಬೇಕಾಗಿರುತ್ತೆ.

ಚಂದಾದಾರರ ಹೆಸರೂ ಮತ್ತು ಮೊಬಲಗು ಜಮೇ ಆದ ರಿಪೋರ್ಟೂ ಯಿವು ಗೆಜೆಟ್ ಆಫೀಸಿಗೆ ತಲಪಿದ ಹೊರ್ತು ಗೆಜೆಟ್‌ಗಳು ಚಂದಾ ದಾರರುಗಳಿಗೆ ಕಳುಹಿಸಲ್ಪಡುವದಿಲ್ಲವಾಗಿ ಸಾವಕಾಶವಾದರೆ ಚಂದಾದಾರರಿಗೆ ಅತೃಪ್ತಿ ಉಂಟಾಗುವದರಿಂದ ಚಂದಾದಾರರು ನಿಂತು ಹೋಗುವದರಿಂದ ಸರಕಾರಕ್ಕೆ ನಷ್ಟವೂ ಸಂಭವಿಸುವದು.

ಟಿ. ಟಿ. ಲೆನರ್ಡ್,
ಕಂಪೈಲರ್, ಮೈಸೂರ ಗೆಜೆಟ್.